10 ವರ್ಷ ಸರ್ವಿಸ್ ಆದಮೇಲೆ ಪ್ರೊಮೋಷನ್ ಕೊಡುತ್ತಿದ್ದರು. ಆದರೆ, ಡಿಫರೆಂಟ್ ಏರಿಯಾಗಳಲ್ಲಿ ಡ್ಯೂಟೀಸ್, ಫಂಕ್ಷನ್ ಬೇರೆ ಬೇರೆ ಇದ್ದುದರಿಂದ, ಈ 8-9 ಜನ ಏನು ಇನ್ನೂ ಉಳಿದಿದ್ದಾರೆ ಅವರು 1947-48ರಲ್ಲಿ ನಮ್ಮ ರಾಜ್ಯದಲ್ಲಿದ್ದಂಥ ಎಲ್.ಐ.ಜಿ. ಕೋರ್ಸ್ ಪಾಸು ಮಾಡಿ, ಇಪ್ಪತ್ತು ವರ್ಷಗಳ ಸರ್ವಿಸ್ ಮಾಡಿದರೂ ಪ್ರಮೋಷನ್ ಕೊಡುವ ನಂದರ್ಭದಲ್ಲಿ ಇರಾಪಯಲ್ಲ ಗೊಂದಲ ಉಂಟಾಗಿದೆ ಎಂದು ಕೇಳಿದ್ದೇನೆ. ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡಬಹುದು; ಆದರೆ ಕಾರಾವಕಾಶ ಇಲ್ಲದ್ದರಿಂದ, ತಾವು ದಯವಿಟ್ಟು ಈ ಅನ್ಯಾಯವನ್ನು ತಪ್ಪಿಸಿ, ಅವರಿಗೆ ಪ್ರಮೋಷನ್ ಕೊಡುವ ಬಗ್ಗೆ ಮಾನ್ಯ ಸಚಿವರು ಪ್ರಯತ್ನ ಮಾಡಬೇಕೆಂದು ತಿಳಿಸಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—Now the House will adjourn and re-assemble at Two of the Clock.

The House rose at Fifty Two minutes past Twelve of the Clock, to re-assembled at Two of the Clock,

(Madam Speaker in the Chair)

Starred Questions (to which oral Answers were given)

Ex-Gratia Payment to Persons Marrying Harijan Girls

615. Sri S. M. SHEERANALY CHANDRASEKHAR (Hosanagar).—Will the Minister for Rural Development and Social Welfare be pleased to state :—

(*a*) whether it is a fact that the Government has taken a decision recently to pay Rs. 2,000 *ex-gratia* to such of those persons, who have married Harijan girls ;

(*b*) if so, the number of persons who have received such *ex-gratia* payment ?

Sri N. RACHAIAH (Minister for Rural Development and Social Welfare.—

(*a*) Yes.

(*b*) Nil.

ಶ್ರೀ ಎಸ್. ಎಂ. ಶೀರಾನ್ನಳಿ ಚಂದ್ರಶೇಖರ್.—ಸ್ವಾಮಿ, ತಾವು ಎರಡು ಸಾವಿರ ರೂಪಾಯಿ ಬಹುಮಾನ ರೂಪದಲ್ಲಿ ಇಟ್ಟಿದ್ದೀರಿ, ಈ ಹಣವನ್ನು ಇದುವರೆಗೂ ಯಾರೂ ಪಡೆದಿಲ್ಲ, ಇದನ್ನು ನೋಡಿದರೆ ತಮ್ಮ ಪ್ರಚಾರ ಸಾಕಷ್ಟಿಲ್ಲ, ಕಡಿಮೆ ಎಂದು ಅರ್ಥವೇ ?

† ಶ್ರೀ ಎನ್. ರಾಚಯ್ಯ.—ಇರಬಹುದು.

ಶ್ರೀ ಎಸ್. ಎಂ. ಶೀರಾನ್ನಳಿ ಚಂದ್ರಶೇಖರ್.—ಇದನ್ನು ಎಲ್ಲಾ ಕಡೆ ಕೈಗೊಂಡು ಸಾಕಾದಷ್ಟು ಉತ್ತೇಜನ ಕೊಡಲಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಯೋಜನೆಯ ಉದ್ದೇಶವೇ ಅದು.

ಶ್ರೀ ಎಸ್. ಎಂ. ಶೀರ್ವಾಳಿ ಚಂದ್ರಶೇಖರ್.–ಇದರಲ್ಲಿ ನಾನು ನಪ್ಲಿ ಮೆಂಟರಿ ಪ್ರಶ್ನೆ ಇನ್ನೊಂದು ಕೇಳಿದ್ದೆ ಅದು ಎಲ್ಲೋ ಕೈತಪ್ಪಿ ಹೋಗಿದೆ, ಈ ಎರಡು ಸಾವಿರ ರೂಪಾಯಿ ಎನ್ನುವುದು ಬಹಳ ಕಡಿಮೆ ಹಣ ಇದೆ. ಈ ರೀತಿ ಅಂತರ್ ಜಾತಿ ವಿವಾಹ ಮಾಡಿಕೊಂಡರೆ, ಆ ಯುವಕ, ಯುವತಿಯರಿಗೆ ಸರ್ಕಾರಿ ನೌಕರಿಯಲ್ಲಿ 30 ಪರ್ಸೆಂಟ್ ರಿಸರ್ವೇಷನ್ ಇಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಈಗಾಗಲೇ ಹರಿಜನ ಗಿರಿಜನರಿಗೆ 18 ಭಾಗ ನಾವು ಮೀಸಲು ಸ್ಥಾನವನ್ನು ಉದ್ಯೋಗದಲ್ಲಿ ಇಟ್ಟಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಅಂತರ್‌ಜಾತಿ ವಿವಾಹ ಆದವರಿಗೆ ಷೆಡ್ಯೂಲ್ಡ್ ಕ್ಯಾಸ್ಟ್ ರಿಸರ್ವೇಷನ್ ಇದೆ ಎಂದು ಹೇಳುತ್ತೀರಿ, ಒಬ್ಬ ಬ್ರಾಹ್ಮಣ ಹುಡುಗ ಹರಿಜನ ಹುಡುಗಿಯನ್ನು ಮದುವೆಯಾದರೆ, ಬ್ರಾಹ್ಮಣ ಹರಿಜನ ಆಗುತ್ತಾನೆಯೇ?

ಶ್ರೀ ಎನ್. ರಾಚಯ್ಯ.—ಒಂದು ಪ್ಯಾಮಿಲಿಗೆ ಒಂದು ಅಪಾಯಿಂಟ್‌ಮೆಂಟ್ ಎಂದು ಇತ್ತೀಚೆಗೆ ಪ್ರಚಾರ ಮಾಡುತ್ತೇವೆ. ಹರಿಜನರು ಹೆಣ್ಣುಮಕ್ಕಳಾಗಲಿ, ಗಂಡುಮಕ್ಕಳಾಗಲಿ, ಒಬ್ಬ ಕಿಚನ್ ಸರ್‌ವೆಂಟ್ ಆದರೂ ಕೊಡುತ್ತೇವೆ. ಗಂಡನಿಗೆ ಸಿಕ್ಕಿದರೆ ಹೆಂಡತಿಗೆ ಸಿಕ್ಕುವುದಿಲ್ಲ. ಹೆಂಡತಿಗೆ ಸಿಕ್ಕಿದರೆ ಗಂಡನಿಗೆ ಸಿಕ್ಕುವುದಿಲ್ಲ. ಯಾರಾದರು ಒಬ್ಬರಿಗೆ ಕೊಡುವ ಹಾಗಾಯ್ತಾರಿ ತೆಗೆದುಕೊಳ್ಳಬಹುದು.

ಶ್ರೀ ಕೋಣಂದೂರು ಲಿಂಗಪ್ಪ.— ಈಗ ಹರಿಜನ ಬಾಲಕಿಯನ್ನು ಮದುವೆಯಾಗತಕ್ಕ ಸವರ್ಣೀಯ ಹಿಂದುಗಳು ಯಾರೇ ಆಗಲಿ ಆ ಯುವಕರಿಗೆ ವಿವಾಹ ಆದಮೇಲೆ ಸರ್ಕಾರಿ ಕೆಲಸವನ್ನು ಖಂಡಿತವಾಗಿ ನಾವು ರಿಸರ್‌ವೇಷನ್ ಮಾಡಿ ಕೊಡುತ್ತೇವೆ ಎನ್ನುವ ಬರವಸೆ ಕೊಡುತ್ತೀರಾ?

ಶ್ರೀ ಎನ್. ರಾಚಯ್ಯ.—ತಪ್ಪುಗೆ ಗೊತ್ತಿದೆ, ಈ ಸಂವಿಧಾನದ ಕಟ್ಟಳೆಯನ್ನು ನಾವು ಅನುಸರಿಸಬೇಕಾಗಿದೆ, ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಈ ರೀತಿ ಮದುವೆಯಾದರೆ ಎರಡು ಸಾವಿರ ರೂಪಾಯಿ ಬಹುಮಾನ ಕೊಡುವುದು ನಿಜ ಎಂದು ತಾವು ಒಪ್ಪಿಕೊಂಡಿದ್ದೀರಿ ಈ ರೀತಿಯಾದ ತೀರ್ಮಾನ ಸರ್ಕಾರದವರು ಯಾವಾಗ ಮಾಡಿದರು.ಇಂತಹ ವ್ಯಕ್ತಿಗಳು ಯಾರಾದರು ಇದ್ದಾರೆಯೇ ಎನ್ನುವ ಪ್ರಶ್ನೆಗೆ ಯಾರು ಇಲ್ಲ ಎಂದು ಹೇಳಿದ್ದೀರಿ, ಅದ್ದರಿಂದ ಈ ಎರಡು ಸಾವಿರ ರೂಪಾಯಿ ಉಪಯೋಗ ಇಲ್ಲ ಎಂದು ಅರ್ಥವಾಗುತ್ತದೆ. ಬೇರೆ ಏನಾದರೂ ಯೋಜನೆಯನ್ನು ಇಂತಹ ಮದುವೆ ಮಾಡಿಸುವುದಕ್ಕೆ ಸರ್ಕಾರದವರು ಮಾಡುತ್ತೀರಾ?

ಶ್ರೀ ಎನ್. ರಾಚಯ್ಯ.—ಈ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಯಾವಾಗ?

ಶ್ರೀ ಎನ್. ರಾಚಯ್ಯ.—ಇದು 10-1-1974ರಲ್ಲಿ ಜಾರಿಗೆ ಬಂದಿದೆ, ಈ ಪರಿಶ್ರಮಗಳನ್ನು ಅನುಸರಿಸುವುದಕ್ಕೆ ಆಗಲಿಲ್ಲವಾದ್ದರಿಂದ ಈ ಸಾಲಭ್ಯ ಯಾರಿಗೂ ಸಿಕ್ಕಿಲ್ಲ, ಮುಂದೆ ತಾವು ಮಾಡ್ಕ ವಂತಹ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಹಣವನ್ನು ಪಡೆಯುವುದಕ್ಕೋಸ್ಕರ ಆ ಉದ್ದೇಶದಿಂದ ಅಂತರ್‌ಜಾತಿ ವಿವಾಹ ಆದಮೇಲೆ ಬಿಟ್ಟುಬಿಟ್ಟರೆ ಏನು ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎನ್. ರಾಚಯ್ಯ.—ಅಂತಹ ಪರಿಸ್ಥಿತಿ ಬಂದಾಗ ಯೋಚನೆ ಮಾಡೋಣ.

ಶ್ರೀ ಎಂ. ಎಂ. ಶೀರ್ವಾಳಿ ಚಂದ್ರಶೇಖರ್.—ಸ್ವಾಮಿ, ಈ ಸರ್ಕಾರಿ ನೌಕರಿಯೊಳಗೆ 30 ಪರ್‌ಸೆಂಟ್ ಬಗ್ಗೆ ಸಂವಿಧಾನಾತ್ಮಕವಾಗಿ ಅಡಚಣೆ ಬರುತ್ತದೆ ಎಂದು ಹೇಳಿದ್ದೀರಿ, ಆ ಸಂವಿಧಾನ ತಿದ್ದುಪಡಿ ಮಾಡುವುದಕ್ಕೆ ಕೇಂದ್ರಕ್ಕೆ ಸಲಹೆ ಕೊಟ್ಟು ಪರಿಶೀಲನೆ ಮಾಡಲು ಪ್ರಯತ್ನ ಮಾಡುತ್ತೀರ

ಶ್ರೀ ಎನ್. ರಾಚಯ್ಯ.—ಈಗಾಗಲೇ ದುರ್ಬಲ ವರ್ಗದವರಿಗೆ 16ನೇ ಆರ್ಟಿಕಲ್ 4ನೇ ಕ್ಲಾಸ್ ಪ್ರಕಾರ ವಿಶೇಷವಾದಂಥ ರಕ್ಷಣೆ ಇದ್ದರೂ ಕೂಡ ಅದನ್ನು ನಾವು ಜಾರಿಗೆ ಕೊಡುವುದಕ್ಕೆ ಆಗಲಿಲ್ಲ. ಅವರನ್ನು ಇಂತಹವರು ಎಂದು ಗುರುತಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿದಮೇಲೆ ಪ್ರಶ್ನೆ ಉದ್ಭವಿಸುತ್ತದೆ, ಅಲ್ಲಿಯತನಕ ಯಾವ ಪ್ರಶ್ನೆ ಉದ್ಭವಿಸುವುದಿಲ್ಲ.